ದಿನಾಂಕಃ 08-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

<u>ಮುಂದುವರೆದ ಪಾಟೀ ಸವಾಲು: **4** ಮತ್ತು **5** ನೇ ಪ್ರತಿವಾದಿ ಪರ ಶ್ರೀ ಎಂಎಂಟಿ ವಕೀಲರಿಂದ:</u>

ನನ್ನ ಜನ್ಮ ದಿನಾಂಕ 29-11-1992. ಕಮಲಾ ಮತ್ತು ವೀರಭದ್ರಪ್ಪ ಮಹಾಲಿಂಗಪೂರ ಪಟ್ಟಣದ ಮನೆಯಲ್ಲಿ ನಾನು ಜನಿಸುವ ಪೂರ್ವದಿಂದಲೂ ವಾಸ ಇರುತ್ತಾರೆ ಎಂದರೆ ಸರಿ. ಸದರಿ ಕಮಲಾ ಮತ್ತು ವೀರಭದ್ರಪ್ಪ ಮದುವೆಯಾಗಿದಯೋ ಇಲ್ಲವೊ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ, ಸಾಕ್ಷಿ ಅವರ ಮದುವೆಯಾಗಿಲ್ಲ ಎಂದು ಹೇಳುತ್ತಾರೆ. ಆ ಬಗ್ಗೆ ನನಗೆ ಮಾಹಿತಿಯನ್ನು ನನ್ನ ಅಜ್ಜಿ ನೀಡಿರುತ್ತಾರೆ. ಸದರಿ ಕಮಲಾ ಮತ್ತು ವೀರಭದ್ರ ಇವರಿಗೆ ಸೇರಿದ ಆಸ್ತಿಯ ದಾಖಲೆಗಳನ್ನು ನಾನು ನೋಡಿಲ್ಲ. ಯಾವ ಆಸ್ತಿ ಮೊದಲು ಖರೀದಿ ಮಾಡಿರುತ್ತಾರೆ, ನಂತರ ಯಾವ ಆಸ್ತಿ ಖರೀದಿ ಮಾಡಿರುತ್ತಾರೆ ಎಂದು ನನಗೆ ವೈಯಕ್ತಿಕವಾಗಿ ಮಾಹಿತಿ ಇರುವುದಿಲ್ಲ.

ಆಸ್ತಿ ನಂ.75, ಕಮಲಾ ಮತ್ತು ವೀರಭದ್ರ ಇವರ ಮಧ್ಯೆ ವಿಭಾಗವಾಗಿರುತ್ತದೆ, ಆದರೆ ಯಾವ ವರ್ಷದಲ್ಲಿ ಆಗಿರುತ್ತದೆ ಎಂದು ಗೊತ್ತಿಲ್ಲ. ಆ ಬಗ್ಗೆ ದಾಖಲೆ ಆಗಿರುವ ವಿಷಯ ಗೊತ್ತಿಲ್ಲ. ವಾಟ್ನಿಪ್ರಕಾರ ಆಸ್ತಿ ನಂ.75 ಯಾರ ಪಾಲಿಗೆ ಹೋಗಿರುತ್ತದೆ ಎಂದು ಗೊತ್ತಿಲ್ಲ. ವೀರಭದ್ರಪ್ಪ ಇವರ ತಂದೆ ಮಲ್ಲಪ್ಪ ಇವರು ದಿನಾಂಕಃ 16-02-1976 ರಂದು ಆಸ್ತಿ ನಂ.75 ನ್ನು ಮರಣ ಪತ್ರದ ಮೂಲಕ ವರ್ಗಾವಣೆ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆಸ್ತಿ ನಂ.75 ಈಗ 4 ಮತ್ತು 5 ನೇ ಪ್ರತಿವಾದಿಯರ ಹೆಸರಿನಲ್ಲಿ ಇದೆ ಎಂದರೆ ಸರಿ. ಆಸ್ತಿ ನಂ.74, ಸದರಿ ವೀರಭದ್ರಪ್ಪ 1964 ರಲ್ಲಿ ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಆಸ್ತಿ ಮಲ್ಲಪ್ಪ ಇವರಿಂದ ವೀರಭದ್ರಪ್ಪ ಇವರಿಗೆ ಬಂದಿರುವುದಾಗಿ ಹೇಳುತ್ತಾರೆ. ಮಲ್ಲಪ್ಪ ಮೃತಪಟ್ಟ ನಂತರ ಬಂದಿದೆಯಾ ಅಥವಾ ಜೀವಂತ ಇದ್ದಾಗೆ ಬಂದಿದೆಯಾ ಎಂದು ಗೊತ್ತಿಲ್ಲ. ಸದರಿ ಆಸ್ತಿ 4 ಮತ್ತು 5 ನೇ ಪ್ರತಿವಾದಿಯರ ಹೆಸರಿನಲ್ಲಿ ಇವೆ ಎಂದರೆ ಸರಿ.

ಆಸ್ತಿ ನಂ.1583, ವೀರಭದ್ರಪ್ಪ ಇವರು 1969 ರಲ್ಲಿ ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಸದರಿ ಖರೀದಿ ವ್ಯವಹಾರದ ಕುರಿತು ನನಗೆ ವೈಯಕ್ತಿಕವಾಗಿ ಮಾಹಿತಿ ಇರುವುದಿಲ್ಲ. ಸದರಿ ಆಸ್ತಿ 4 ಮತ್ತು 5 ನೇ ಪ್ರತಿವಾದಿಯರ ಹೆಸರಿನಲ್ಲಿವೆ ಎಂದರೆ ಸರಿ. ಸದರಿ ಮೂರು ಆಸ್ತಿಗಳು 4 ಮತ್ತು 5 ನೇ ಪ್ರತಿವಾದಿಯರ ಸ್ವಾಧೀನದಲ್ಲಿವೆ ಎಂದರೆ ಸರಿ.

ಜಮೀನು ಸರ್ವೆ ನಂ.574/1 ವೀರಭದ್ರಪ್ಪ ಅವರಿಗೆ ಅವರ ತಂದೆ ಮಲ್ಲಪ್ಪಯಿಂದ ಬಂದಿರುತ್ತದೆ. ಸದರಿ ಆಸ್ತಿ ಯಾವ ಕಾಲಕ್ಕೂ ಮಲ್ಲಪ್ಪನ ಹೆಸರಿನಲ್ಲಿ ಇರಲಿಲ್ಲ, ಅವರ ಹೆಂಡತಿ ಬಸವ್ವ 1967 ರಲ್ಲಿ ಖರೀದಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಬಸವ್ವ ಸದರಿ ಜಮೀನು ತನ್ನ ಮಗನಾದ ವೀರಭದ್ರಪ್ಪ ಇವರಿಗೆ ಬಿಟ್ಟು ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಜಮೀನು ಸರ್ವೆ ನಂ.573/2 ಮಲ್ಲಪ್ಪ ಸ್ವಯಾರ್ಜಿತ ಆಸ್ತಿ ಎಂದರೆ ಸರಿ. ಸದರಿ ಆಸ್ತಿಯನ್ನು ತನ್ನ ಜೀವಿತ ಕಾಲದಲ್ಲಿ ಅವರ ಹೆಂಡತಿ ಬಸವ್ವ ಇವರ ಹೆಸರಿನಲ್ಲಿ ವರ್ಗಾವಣೆ ಮಾಡಿದ್ದರು ಎಂದರೆ ಗೊತ್ತಿಲ್ಲ. ಅದರಂತೆ ಕಂದಾಯ ದಾಖಲೆಗಳಲ್ಲಿ ಬಸವ್ವ ಇವರ ಹೆಸರು ಇತ್ತು ಎಂದರೆ ನನಗೆ ಗೊತ್ತಿಲ್ಲ. ನಂತರ ಬಸವ್ವ ಇವರು ಸದರಿ ಜಮೀನನ್ನು ವೀರಭದ್ರಪ್ಪ ಇವರ ಹೆಸರಿಗೆ ವರ್ಗಾವಣೆ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ಜಮೀನು ಸರ್ವೆ ನಂ.572/2 ಸಿ ಮತ್ತು 572/2 ಡಿ ನಮ್ಮ ಕುಟುಂಬಕ್ಕೆ ಯಾವ ಮೂಲಕ ಬಂದಿದ್ದವು ಎಂದರೆ ನನಗೆ ಗೊತ್ತಿಲ್ಲ. ಸದರಿ ಎರಡು ಜಮೀನುಗಳನ್ನು ವೀರಭದ್ರಪ್ಪ ಇವರ ಹೆಂಡತಿ ಕಮಲಾ 2002 ರಲ್ಲಿ ಖರೀದಿ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಜಮೀನುಗಳು ಈಗ 4 ಮತ್ತು 5 ನೇ ಪ್ರತಿವಾದಿಯರ ಹೆಸರಿನಲ್ಲಿವೆ ಎಂದರೆ ಸರಿ. ಕಮಲಾ, 4 ಮತ್ತು 5 ನೇ ಪ್ರತಿವಾದಿಯರು ಖೊಟ್ಟಿಯಾಗಿ ತಯಾರಿಸಿಕೊಂಡಿರುತ್ತಾರೆ ಎಂದು ಹೇಳಿದ ದಾಖಲೆಗಳಾದ ಹಕ್ಕು ಬಿಟ್ಟು ಕೊಟ್ಟ ಪತ್ರ ಮತ್ತು ಭಕ್ಷಿಸ ಪತ್ರಗಳನ್ನು ನಾನು ನೋಡಿರುವುದಿಲ್ಲ. ಸಾಕ್ಷಿಗೆ ಒಂದು ದಾಖಲೆ ತೋರಿಸಿ, ನನ್ನ ಮುಖ್ಯ ವಿಚಾರಣೆಯ ಕಂಡಕೆ 12 ರಲ್ಲಿ ಹೇಳಿದ ಸಂಗತಿಗೆ ಸಂಬಂಧಿಸಿದ ದಾಖಲೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ.

ನನ್ನ ತಂದೆ, ನನ್ನ ಕಾಕಾ ಮತ್ತು ನನ್ನ ಅಜ್ಜಿ ಸರಸ್ವತಿ ಮೂಲ ದಾವೆ ಸಂ.101/1992 ನ್ನು ಸಲ್ಲಿಸಿರುವುದು ನನಗೆ ಗೊತ್ತಿಲ್ಲ. ಸದರಿ ದಾವೆಯು ರಾಜೀ ಸಂಧಾನ ಮಾಡಿಕೊಂಡಿದ್ದು, ಅದರ ಪ್ರಕಾರ ನನ್ನ ತಂದೆ, ಕಾಕಾ ಮತ್ತು ಅಜ್ಜಿಗೆ ಜಮೀನು ಸರ್ವೆ ನಂ.28/2 ಕೊಟ್ಟಿದ್ದರು ಎಂದರೆ ಗೊತ್ತಿಲ್ಲ. ಸದರಿ ಜಮೀನನ್ನು ನನ್ನ ತಂದೆ ಮತ್ತು ಅಜ್ಜಿ ಕೂಡಿಕೊಂಡು ಯರಟ್ಟಿ ಇವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳಲ್ಲಿ ನಮಗೆ ಯಾವುದೇ ಪಾಲು ಇಲ್ಲದೆ ಇದ್ದರೂ ಸುಳ್ಳು ಪ್ರಕರಣ ದಾಖಲು ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು: 2 ನೇ ಪ್ರತಿವಾದಿ ಪರ ಕುಮಾರಿ ಎಎಎಚ್ ವಕೀಲರಿಂದ:**

ಸದರಿ ವಕೀಲರು ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

**ಮರು ವಿಚಾರಣೆ: ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿರುವರು.

ASHAPPA
Digitally signed by ASHAPPA
Date: 2025.07.09 15:57:04 +0530

ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಪ್ರ.ದ.ನ್ಯಾದಂ.ಗಳು, ಬನಹಟ್ಟಿ